**<u>ದಿನಾಂಕಃ 26.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀಮತಿ. ಎಸ್.ಬಿ.ಎಸ್ ವಕೀಲರಿಂದಃ</u>**

ಈ ಹಿಂದೆ ದಿನಾಂಕ 27.03.2019 ರಂದು ವಾದಿ ಕೃಷ್ಣೇಗೌಡರವರು ಪಿಡಬ್ಲೂ-1 ಆಗಿ ವಿಚಾರಣೆಗೊಳಗಾಗಿ ನಿಪಿ-1 ರಿಂದ ನಿಪಿ-6 ರ ದಾಖಲಾತಿಗಳು ನಿಶಾನೆಗೊಳಪಟ್ಟಿದ್ದವು. ಆದರೆ ಕಡತದಲ್ಲಿ ನಿಪಿ-6 ರಂತೆ ನಿಶಾನೆಯಾಗಿ ಗುರುತಿಸಿದ್ದ ದಿನಾಂಕ 06.02.2017 ರ ಪ್ರತ್ಯುತ್ತರ ತಿಳುವಳಿಕೆ ಪತ್ರವು ಇಲ್ಲದ ಕಾರಣ ಈ ಹಿಂದೆ ಪ್ರಾಸಾ-4 ರವರು ದಿನಾಂಕ 05.11.2024 ರಂದು ಪ್ರಾಸಾ-1 ರವರ ಮೂಲಕ ನಿಶಾನೆಗೊಳಪಟ್ಟಿರುವ ನಿಪಿ-1 ರಿಂದ ನಿಪಿ-5 ರ ದಾಖಲಾತಿಗಳನ್ನು ಮಾತ್ರ ಅಳವಡಿಸಿಕೊಂಡಿದ್ದಾರೆ.

ದಿನಾಂಕ 06.02.2017 ರ ಪ್ರತ್ಯುತ್ತರ ತಿಳುವಳಿಕೆ ಪತ್ರದ ಕಛೇರಿಯ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು **ನಿಪಿ-7** ಎಂದು ಗುರುತಿಸಲಾಯಿತು.

**<u>ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ.